# IVನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

**ಉಪಸ್ಥಿತರುಃ**

**ಶ್ರೀ ಕೇಶವಮೂರ್ತಿ.ಬಿ.**
ಬಿ.ಎ. ಎಲ್‌ಎಲ್.ಬಿ,
IVನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ,
ಬೆಂಗಳೂರು ನಗರ.

**12ನೇ ತಾರೀಖು ಫೆಬ್ರವರಿ, 2025**

**ಸಿಸಿ ಸಂಖ್ಯೆ - 18018/2017**

ಆರೋಪಿಗಳು ಃ

1. ಶ್ರೀ ವೆಂಕಟೇಶ್.ಜಿ.,
   ಬಿನ್. ಗಂಗಪ್ಪ, 36 ವರ್ಷ,

2. ಶ್ರೀಮತಿ ಲಕ್ಷ್ಮಮ್ಮ,
   ಕೋಂ. ಲೇಟ್ ಗಂಗಪ್ಪ, 54 ವರ್ಷ,

ಇಬ್ಬರ ವಾಸಃ ನಂ.2/3, ಆನಂದ ಲೇಔಟ್,
ಮಸ್ತೂರ್ ರಸ್ತೆ, ಪ್ರಶಾಂತನಗರ,
ಚಿಕ್ಕಬಳ್ಳಾಪುರ ತಾಃ ಮತ್ತು ಜಿಲ್ಲೆ.

3. ಸುಬ್ರಮಣಿ @ ಸುಬ್ಬಣ್ಣ,
   ಬಿನ್. ಲೇಟ್ ರಾಮಯ್ಯ @ ರಾಮಣ್ಣ,
   60 ವರ್ಷ, ವಾಸಃ ಶ್ರೀರಾಮಪುರ ಗ್ರಾಮ,
   ಜಕ್ಕೂರು ಅಂಚೆ, ಬೆಂಗಳೂರು ನಗರ.

**-ವಿರುದ್ಧ-**

**ದೂರುದಾರರುಃ** ಸರ್ಕಾರದ ಪರವಾಗಿ ಅಮೃತಹಳ್ಳಿ
ಪೋಲಿಸ್ ಠಾಣೆ

(ದೂರುದಾರರ ಪರ ಮಾನ್ಯ ಹಿ.ಸ.ಸ.ಅ. ರವರು)

**:: ದಂಡ ಪ್ರಕಿಯಾ ಸಂಹಿತೆ ಕಲಂ 239 ರಡಿಯಲ್ಲಿ 1 ರಿಂದ 3ನೇ ಆರೋಪಿಗಳ ಪರ ಸಲ್ಲಿಸಿರುವ ಅರ್ಜಿಯ ಮೇಲೆ ಆದೇಶ ::**

1 ರಿಂದ 3ನೇ ಆರೋಪಿಗಳ ಪರ ವಕೀಲರು ಪ್ರತ್ಯೇಕ ಅರ್ಜಿಯನ್ನು ದಂಡ ಪ್ರಕಿಯಾ ಸಂಹಿತೆ ಕಲಂ 239 ರಡಿಯಲ್ಲಿ ಸಲ್ಲಿಸಿ ಈ ಪ್ರಕರಣದ ತನಿಖಾಧಿಕಾರಿಗಳು ಪ್ರಕರಣದ ತನಿಖೆಯನ್ನು ಸೂಕ್ತವಾಗಿ ನಡೆಸಿರುವುದಿಲ್ಲವೆಂದು ಮತ್ತು ಆರೋಪಿಗಳು ಭಾ. ದಂ. ಸಂ. ಕಲಂ **406, 420 ಹಾಗೂ 120ಬಿ ಸಹವಾಚಕ 34** ರ ಅಪರಾಧಗಳನ್ನು ಮಾಡಿರುವುದಕ್ಕೆ ಯಾವುದೇ ಸಾಕ್ಷಾಧಾರಗಳಿರುವುದಿಲ್ಲವೆಂದು, ಆದ್ದರಿಂದ ಆರೋಪಿಗಳನ್ನು ಪ್ರಕರಣದಿಂದ ವಿಮುಕ್ತಿಗೊಳಿಸುವಂತೆ ಕೋರಿರುತ್ತಾರೆ.

2. **ಆರೋಪಿಗಳ/ಅರ್ಜಿದಾರರ ಅರ್ಜಿಯ ಸಾರಾಂಶ ಈ ಕೆಳಕಂಡಂತೆಃ**

ಆರೋಪಿಗಳು ತಮ್ಮ ತಮ್ಮ ಅರ್ಜಿಯಲ್ಲಿ ಮೇಲ್ಕಂಡ ಅಪರಾಧಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಾಣುವಂತೆ ಯಾವುದೇ ನೇರ ಸಾಕ್ಷಾಧಾರಗಳಿರುವುದಿಲ್ಲವೆಂದು, ಆರೋಪಿಗಳನ್ನು ಈ ಪ್ರಕರಣದಲ್ಲಿ ಸುಳ್ಳು ದೂರಿನ ಅನ್ವಯ ತಪ್ಪಾಗಿ ಸೇರ್ಪಡೆ ಮಾಡಿರುವುದಾಗಿ, ಆರೋಪಿಗಳು ಅಮಾಯಕ ವ್ಯಕ್ತಿಗಳಾಗಿದ್ದು, ದೂರುದಾರರಾದ ಶ್ರೀ ಬಿ.ಜಿ. ಚನ್ನಪ್ಪ ರವರು ನೀಡಿದ ಸುಳ್ಳು ದೂರಿನ ಆಧಾರದ ಮೇಲೆ ಉದ್ದೇಶಪೂರ್ವಕವಾಗಿ ದ್ವೇಷದಿಂದ ಈ ಪ್ರಕರಣದಲ್ಲಿ ಅಳವಡಿಸಿರುವುದಾಗಿ ಪ್ರತಿಪಾದಿಸುತ್ತಾರೆ. ಮುಂದುವರೆದು, ದೂರುದಾರರು ಮತ್ತು ಆರೋಪಿಗಳ ನಡುವೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ವಿವಾದಿತ ಸ್ವತ್ತಿನ ಸಂಬಂಧ ಬಾಕಿ ಇರುವುದಾಗಿ, ಪ್ರಕರಣವೂ ಸಿವಿಲ್ ಸ್ವರೂಪದಾಗಿದ್ದು, ಆದ್ದರಿಂದ ಈ ಪ್ರಕರಣವನ್ನು ಈ ಹಂತದಲ್ಲಿ ವಜಾಗೊಳಿಸಿ ಆರೋಪಿಗಳನ್ನು ಪ್ರಕರಣದಿಂದ ವಿಮೋಚನೆಗೊಳಿಸಬೇಕೆಂದು ಕೋರುತ್ತಾರೆ.

**3.** ಮಾನ್ಯ ಹಿರಿಯ ಸರ್ಕಾರಿ ಸಹಾಯಕ ಅಭಿಯೋಜಕರು ಈ ಅರ್ಜಿಗೆ ತಕರಾರು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ ಆರೋಪಿಗಳು ಭಾ. ದಂ. ಸಂ. ಕಲಂ **406, 420**

**ಹಾಗೂ 120ಬಿ ಸಹವಾಚಕ 34** ರ ಅಪರಾಧಗಳನ್ನು ಮಾಡಿರುವುದಕ್ಕೆ ಸಾಕಷ್ಟು ಸಾಕ್ಷಾಧಾರಗಳು ಇರುವುದು ತನಿಖೆಯಿಂದ ಸಾಭೀತಾಗಿರುತ್ತದೆಂದು, ಮುಂದುವರೆದು, ಆರೋಪಿಗಳು ಮೇಲ್ಕಂಡ ಅಪರಾಧಗಳನ್ನು ಮಾಡಿರುವುದಕ್ಕೆ ದಸ್ತಾವೇಜು ಸಾಕ್ಷ್ಯ ಇರುವುದಾಗಿ, ತನಿಖಾಧಿಕಾರಿಗಳು ಸೂಕ್ತ ರೀತಿಯಲ್ಲಿ ತನಿಖೆ ಮಾಡಿ ಸಾಕ್ಷಾಧಾರಗಳನ್ನು ಸಂಗ್ರಹಿಸಿ ಆರೋಪಿಗಳು ಮೇಲ್ಕಂಡ ಅಪರಾಧ ಮಾಡಿರುವುದು ತನಿಖೆಯಿಂದ ಸಾಭೀತಾದ ಮೇರೆಗೆ ಆರೋಪಿಗಳ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ, ಅರ್ಜಿಗಳ ಮೇಲೆ ಆದೇಶ ಮಾಡುವಾಗ ಸಂಪೂರ್ಣ ದೋಷಾರೋಪಣಾ ಪತ್ರವನ್ನು ಪರಿಶೀಲಿಸಬೇಕೆಂದು ಕೋರುತ್ತಾರೆ. ಮುಂದುವರೆದು, ಈ ಹಂತದಲ್ಲಿ ಆರೋಪಿಗಳನ್ನು ವಿಮೋಚನೆಗೊಳಿಸಲು ಸಾಧ್ಯವಿರುವುದಿಲ್ಲವೆಂದು, ಆರೋಪಿಗಳ ವಿರುದ್ಧ ಮೇಲ್ನೋಟಕ್ಕೆ ಕಾಣುವಂತೆ ಮೇಲ್ಕಂಡ ಅಪರಾಧಗಳನ್ನು ಮಾಡಿರುವುದಕ್ಕೆ ಸಾಕ್ಷಾಧಾರಗಳಿರುವುದಾಗಿ, ಈ ಎಲ್ಲಾ ಕಾರಣಗಳಿಂದ ಆರೋಪಿಗಳ ಪರ ಸಲ್ಲಿಸಿರುವ ಮೇಲ್ಕಂಡ ಅರ್ಜಿಗಳನ್ನು ವಜಾ ಗೊಳಿಸಬೇಕೆಂದು ಕೋರುತ್ತಾರೆ.

4. ಆರೋಪಿಗಳ ಪರ ಅರ್ಜಿ, ಮಾನ್ಯ ಸ.ಸ.ಅ. ರವರ ತಕರಾರು ಮತ್ತು ವಾದವನ್ನು ಆಲಿಸಿದ ನಂತರ ನನ್ನ ತೀರ್ಮಾನಕ್ಕೆ ಉದ್ಭವಿಸುವ ಪ್ರಶ್ನೆಗಳು ಈ ಕೆಳಕಂಡಂತೆಃ

1) **1 ರಿಂದ 3ನೇ ಆರೋಪಿಗಳು ತಮ್ಮ ವಿರುದ್ಧ ಭಾ. ದಂ. ಸಂ. ಕಲಂ 406, 420 ಹಾಗೂ 120ಬಿ ಸಹವಾಚಕ 34 ರ ಆರೋಪಗಳಿಗೆ ದೋಷಾರೋಪಣಾ ಪತ್ರ ರಚಿಸಲು ಸಾಕಷ್ಟು ಸಾಕ್ಷಾಧಾರಗಳು ಇರುವುದಿಲ್ಲವೆಂದು ಮತ್ತು ದಂ. ಪ್ರ. ಸಂಹಿತೆ ಕಲಂ 239 ರನ್ವಯ ಸಲ್ಲಿಸಿದ ಅರ್ಜಿ ಅಂಗೀಕರಿಸಲು ಸೂಕ್ತ ಕಾರಣಗಳಿರುತ್ತದೆ ಎಂದು ತೋರ್ಪಡಿಸಿರುತ್ತಾರೆಯೇ?**

2) **ಯಾವ ಆದೇಶ ?**

5. ಮೇಲ್ಕಂಡ ಪ್ರಶ್ನೆಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ

ಪ್ರಶ್ನೆಃ 1 ಃ **ನಕಾರಾತ್ಮಕವಾಗಿ**
ಪ್ರಶ್ನೆಃ 2 ಃ ಅಂತಿಮ ಆದೇಶದಂತೆ.

**: ಕಾರಣಗಳು :**

**6.** 1 ರಿಂದ 3ನೇ ಆರೋಪಿಗಳು ತಮ್ಮ ತಮ್ಮ ಅರ್ಜಿಯಲ್ಲಿ ಮೇಲ್ಕಂಡ ಅಪರಾಧಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಾಣುವಂತೆ ಯಾವುದೇ ನೇರ ಸಾಕ್ಷಾಧಾರಗಳಿರುವುದಿಲ್ಲವೆಂದು, ಆರೋಪಿಗಳನ್ನು ಈ ಪ್ರಕರಣದಲ್ಲಿ ಸುಳ್ಳು ದೂರಿನ ಅನ್ವಯ ತಪ್ಪಾಗಿ ಸೇರ್ಪಡೆ ಮಾಡಿರುವುದಾಗಿ, ಆದ್ದರಿಂದ ಈ ಪ್ರಕರಣವನ್ನು ಈ ಹಂತದಲ್ಲಿ ವಜಾಗೊಳಿಸಿ ಆರೋಪಿಗಳನ್ನು ಪ್ರಕರಣದಿಂದ ವಿಮೋಚನೆಗೊಳಿಸಬೇಕೆಂದು ಕೋರುತ್ತಾರೆ.

**7.** ಅಭಿಯೋಜನೆಯ ಪ್ರಕರಣವನ್ನು ಪರಿಶೀಲಿಸಿದಾಗ, ಆರೋಪಿ 1 ಮತ್ತು 3 ರವರು ದಿನಾಂಕ 10-01-0214 ರಂದು ಚಾಸಾ-1 ರವರ ಪರವಾಗಿ ವಿವಾದಿತ ಸ್ವತ್ತಿನ ಸಂಬಂಧ ಕ್ರಯದ ಕರಾರು ಪತ್ರ ಬರೆದುಕೊಟ್ಟು ಮೊಬಲಗು 85,51,646 ರೂ. ಗಳನ್ನು ಮುಂಗಡ ಹಣವಾಗಿ ಪಡೆದಿದ್ದು, ಸದರಿ ಕರಾರಿನ್ವಯ ಚಾಸಾ-1 ರವರ ಪರವಾಗಿ ಕ್ರಯಪತ್ರ ಬರೆದು ಕೊಡದೇ, ಇದಕ್ಕೆ ಬದಲಾಗಿ 3ನೇ ಆರೋಪಿಯು 1ನೇ ಆರೋಪಿಯ ಪರವಾಗಿ ಕ್ರಯಪತ್ರ ಬರೆದುಕೊಟ್ಟು, ನಂತರ 1ನೇ ಆರೋಪಿಯು 2ನೇ ಆರೋಪಿಗೆ ದಾನಪತ್ರ ಬರೆದು ಕೊಟ್ಟಿದ್ದು, ಈ ಮೂಲಕ ಆರೋಪಿಗಳು ಪರಸ್ಪರ ಒಳಸಂಚು ರಚಿಸಿ ಚಾಸಾ-1 ರವರಿಗೆ ಮೋಸ ಮಾಡಿರುವುದಾಗಿ ಆಪಾದಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

**8.** ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ದಿನಾಂಕ 28-04-2013 ರ ಹಕ್ಕು ಖುಲಾಸೆ ಪತ್ರದಂತೆ 3ನೇ ಆರೋಪಿಯು ವಿವಾದಿತ ಸ್ವತ್ತಿನ ಮಾಲೀಕರಾಗಿರುವುದು ಕಂಡು ಬರುತ್ತದೆ. 3ನೇ ಆರೋಪಿಯು ದಿನಾಂಕ 13-12-2013 ರಂದು ಸದರಿ ಸ್ವತ್ತಿನ ಸಂಬಂಧ 1ನೇ ಆರೋಪಿಯ ಪರವಾಗಿ ಕ್ರಯದ ಕರಾರುಪತ್ರ ಬರೆದು ಕೊಟ್ಟಿರುವುದು ಕಂಡು ಬರುತ್ತದೆ. 1 ಮತ್ತು 3ನೇ ಆರೋಪಿಗಳು ದಿನಾಂಕ 10-01-2014 ರಂದು ಚಾಸಾ-1 ರವರ ಪರವಾಗಿ ಸದರಿ ಸ್ವತ್ತಿನ ಸಂಬಂಧ ಕ್ರಯದ ಕರಾರುಪತ್ರ ಮಾಡಿಕೊಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಸದರಿ ಕ್ರಯದ ಕರಾರುಪತ್ರದ ನೈಜತೆಯ ಸಂಬಂಧ ವಿವಾದ ಇರುತ್ತದೆ, ಆದರೆ ಸದರಿ ಕ್ರಯದ ಕರಾರುಪತ್ರದನ್ವಯ ಚಾಸಾ-1 ರವರಿಂದ ಮುಂಗಡ ಹಣ ಪಡೆದಿರುವುದಕ್ಕೆ ಬ್ಯಾಂಕ್ ಸ್ಟೇಟ್ ಮೆಂಟ್ ಹಾಗೂ ಇತರೆ ದಾಖಲಾತಿಗಳು ಇರುತ್ತವೆ. ಆದ್ದರಿಂದ ಸದರಿ ಕರಾರುಪತ್ರದ ನೈಜತೆಯನ್ನು ಈ ಹಂತದಲ್ಲಿ ಅಲ್ಲಗಳೆಯಲು ಸಾಧ್ಯವಿರುವುದಿಲ್ಲ. ಈ ರೀತಿ ಕ್ರಯದ ಕರಾರುಪತ್ರವಾದ ನಂತರ 3ನೇ

ಆರೋಪಿಯು 1ನೇ ಆರೋಪಿಗೆ ದಿನಾಂಕ 03-03-2014 ರಲ್ಲಿ ಸದರಿ ಸ್ವತ್ತಿನ ಸಂಬಂಧ ಕ್ರಯದ ಪತ್ರ ಬರೆದುಕೊಟ್ಟಿರುತ್ತಾರೆ, ಆ ನಂತರ 1ನೇ ಆರೋಪಿಯು ದಿನಾಂಕ 03.01.2014 ರ ನೊಂದಾಯಿತ ದಾನ ಪತ್ರದ ನಂತರ ಸದರಿ ಸ್ವತ್ತನ್ನು 2ನೇ ಆರೋಪಿಗೆ ವರ್ಗಾವಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ಎಲ್ಲಾ ದಾಖಲಾತಿಗಳು 1 ರಿಂದ 3 ನೇ ಆರೋಪಿಗಳು ಪರಸ್ಪರ ಶಾಮೀಲಾಗಿ ಚಾಸಾ-1 ರವರ ಪರವಾಗಿ ಕ್ರಯದ ಕರಾರುಪತ್ರ ಬರೆದುಕೊಟ್ಟು ಮುಂಗಡ ಹಣ ಪಡೆದು ಕ್ರಯಪತ್ರವನ್ನು ನೋಂದಣಿ ಮಾಡಿಕೊಡದೇ ನಂಬಿಕೆ ದ್ರೋಹ ಮತ್ತು ಮೋಸ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆ ಕಾರಣ ಈ ಪ್ರಕರಣವು ವಿಚಾರಣೆ ಮಾಡಲು ಯೋಗ್ಯ ಪ್ರಕರಣವಾಗಿರುತ್ತದೆ.

**9.** ದಂಡ ಪ್ರಕ್ರಿಯಾ ಸಂಹಿತೆ ಕಲಂ 239 ರನ್ವಯ ಅರ್ಜಿಗಳನ್ನು ಪರಿಗಣಿಸುವಾಗ ನ್ಯಾಯಾಲಯ ದೋಷಾರೋಪಣಾ ಪಟ್ಟಿಯಲ್ಲಿನ ಅಂಶಗಳನ್ನು ಮತ್ತು ಅದರ ಜೊತೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಗಣಿಸಿ ಅರ್ಜಿ ಗಳನ್ನು ವಿಲೇವಾರಿ ಮಾಡಬೇಕೆಂದು ಮತ್ತು ಆರೋಪಿಗಳ ಪ್ರತಿಪಾದನೆಯನ್ನು ಪರಿಗಣಿಸಿ ಸದರಿ ಅರ್ಜಿಗಳನ್ನು ವಿಲೇವಾರಿ ಮಾಡಬಾರದೆಂದು ಮತ್ತು ಸದರಿ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಯಾವೆಲ್ಲ ಅಂಶಗಳನ್ನು ಪರಿಗಣಿಸಬೇಕೆಂದು ಗೌರವಾನ್ವಿತ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯ ಈ ಕೆಳಕಂಡ ತೀರ್ಪುಗಳಲ್ಲಿ ಸ್ಪಷ್ಟಪಡಿಸಿರುತ್ತದೆ.

The Honb'le Apex Court titled ***"Kanti Badra Shah Vs. State of West Bengal" cited as "AIR 2000 SC 522"*** wherein it is held by Hon'ble Apex Court as stated infra:-

> **"... if the trial Court decides to frame a charge there is no legal requirement that as to that it should pass an order specifying the reasons as to why it opts to do so. Framing of charge itself is prima facie order that the trial Judge has formed the opinion, upon considering the police report and other documents and after hearing both sides, that there is ground for presuming that the Accused has committed the offence concerned..."**

In another dictum of the Hon'ble Apex titled ***State of Orissa v/s Deberndra Nath Pandhi cited in 2005 SCC [crl] page 415*** – on the foothold of earlier dictum of Hon'ble Apex court and other salubrious dictums depicted below has held that during the stage of framing of the charges the court cannot look into the say of the Accused and the relevant portion is extracted infra for useful reading:-

> ***No provision in the Code grants to the Accused any right to file any material or document at the stage of framing of charge. That right is granted only at the stage of the trial.***
>
> ***"...In State of Bihar v. Ramesh Singh [ (1977) 4 SCC 39 ] considering the scope of Sections 227 and 228 of the Code, it was held that at the stage of framing of charge it is not obligatory for the Judge to consider in any detail and weigh in a sensitive balance whether the facts, if proved, would be incompatible with the innocence of the Accused or not. At that stage, the court is not to see whether there is sufficient ground for conviction of the Accused or whether the trial is sure to end in his conviction. Strong suspicion, at the initial stage of framing of charge, is sufficient to frame the charge and in that event it is not open to say that there is no sufficient ground for proceeding against the Accused.***
>
> ***"...All the decisions, when they hold that there can only be limited evaluation of materials and documents on record and sifting of evidence to prima facie find out whether sufficient ground exists or not for the purpose of proceeding further with the trial, have so held with reference to materials and documents produced by the prosecution and not the Accused. The decisions***

*proceed on the basis of settled legal position that the material as produced by the prosecution alone is to be considered and not the one produced by the Accused. The latter aspect relating to the Accused though has not been specifically stated, yet it is implicit in the decisions. It seems to have not been specifically so stated as it was taken to be well settled proposition. This aspect, however, has been adverted to in State Anti-Corruption Bureau, Hyderabad and Another v. P. Suryaprakasam [1999 SCC (Crl.) 373] where considering the scope of Sections 239 and 240 of the Code it was held that at the time of framing of charge, what the trial court is required to, and can consider are only the police report referred to under Section 173 of the Code and the documents sent with it. The only right the Accused has at that stage is of being heard and nothing beyond that (emphasis supplied). The judgment of the High Court quashing the proceedings by looking into the documents filed by the Accused in support of his claim that no case was made out against him even before the trial had commenced was reversed by this Court. It may be noticed here that learned counsel for the parties addressed the arguments on the basis that the principles applicable would be same whether the case be under Sections 227 and 228 or under Sections 239 and 240 of the Code..."*

**ILR 2012 KAR 5656 between Smt. Yeshodha S. And Another V/s. State by Central Bureau of Investigation, Ganga Road, Bellary Road,** the Honb'le High Court of karnataka in Para-10 its held that, the jurisdiction of the learned Sessions judge.

**While exercising the power under S.227 Cr. P.C. is limited. Charge can be framed on the basis of strong**

suspicion. Marshaling and appreciation of evidence is not the domain of the Court at that stage of the case At the stage of framing the charge, Trial Court is not required to go into the details of investigation, but to only arrive at a primafacie finding on the material made available as to whether a charge can be sustained as recommended in the charge sheet. Holding of a mini trial at the time of framing of charge is not permissible. In this context it is appropriate to refer to the ratio of decision in the case of State of Bihar Vs. Ramesh Singh, (1977) 4 SCC 39, wherein it has been held as follows:

*"4. Reading the two provisions together in juxta position, as they have got to be, it would be clear that at the beginning and the initial stage of the trial the truth, veracity and effect of the evidence which the Prosecutor proposes to adduce are not to be meticulously judged. Nor is any weight to be attached to the probable defence of the accused. It is not obligatory for the Judge at that stage of the trial to consider in any detail and weigh in a sensitive balance whether the facts, if proved, would be incompatible with the innocence of the accused or not. The standard of test and judgment which is to be finally applied before recording a finding regarding the guilt or otherwise of the accused is not exactly to be applied at the stage of deciding the matter under Section 227 or Section 228 of the Code. At that stage the Court is not to see whether there is sufficient ground for conviction of the accused or whether the trial is sure to end in his conviction."*

ಗೌರವಾನ್ವಿತ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯಗಳು ಮೇಲ್ಕಂಡ ತೀರ್ಪುಗಳಲ್ಲಿ ಸ್ಪಷ್ಟಪಡಿಸಸಿರುವುದು ಏನೆಂದರೆ ವಿಚಾರಣಾ ನ್ಯಾಯಾಲಯ ದೋಷಾರೋಪಣೆ ರಚಿಸುವ ಪೂರ್ವದಲ್ಲಿ ದೋಷಾರೋಪಣೆ ರಚಿಸಲು ಕಾರಣಗಳನ್ನು ನೀಡಿ ವಿವರವಾದ ಆದೇಶವನ್ನು ಮಾಡುವ ಅಗತ್ಯ ಇರುವುದಿಲ್ಲ, ಮುಂದುವರೆದು ಅಭಿಯೋಜನೆಯ ಅಂಶಗಳನ್ನು ಸೂಕ್ಷ್ಮವಾಗಿ ಮತ್ತು ಸವಿವರವಾಗಿ ಪರಾಮರ್ಶಿಸುವ

ಅಗತ್ಯವಿರುವುದಿಲ್ಲ, ಅದೇ ರೀತಿ ವಿಚಾರಣೆ ನಡೆದಲ್ಲಿ ಆರೋಪಿಗಳಿಗೆ ಶಿಕ್ಷೆಯಾಗುತ್ತದೆ ಎಂದು ಖಚಿತ ಸಾಕ್ಷ್ಯಾಧಾರ ಇರುವುದಾಗಿ ಅಭಿಪ್ರಾಯ ವ್ಯಕ್ತಪಡಿಸುವ ಅಗತ್ಯವಿರುವುದಿಲ್ಲ. ಮುಂದುವರೆದು, ದೋಷಾರೋಪಣೆ ರಚಿಸಲು ಅಗತ್ಯವಾದ ಮೇಲ್ನೋಟಕ್ಕೆ ಕಾಣುವಂತಹ ಪ್ರಕರಣ ಕಂಡು ಬಂದಲ್ಲಿ ಸಾಕಾಗುತ್ತದೆ, ಗಂಭೀರವಾಗಿ ಪ್ರಕರಣವನ್ನು ಪರಾಮರ್ಶಿಸುವ ಅಗತ್ಯ ಇರುವುದಿಲ್ಲ. ಈ ಎಲ್ಲಾ ಮೇಲ್ಕಂಡ ತತ್ವಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುತ್ತದೆ, ಈ ಪ್ರಕರಣದಲ್ಲಿ ಆರೋಪಿಗಳ ಪರ ವಕೀಲರು ಸದರಿ ಆರೋಪಿಗಳು ಯಾವುದೇ ಅಪರಾಧಿಕ ಕೃತ್ಯ ಮಾಡಿರುವುದಿಲ್ಲವೆಂದು ಮೌಖಿಕವಾಗಿ ಪ್ರತಿಪಾದಿಸುವುದನ್ನು ಪರಿಗಣಿಸಿ, ಸದರಿ ಆರೋಪಿಗಳನ್ನು ಪ್ರಕರಣದಿಂದ ವಿಮೋಚನೆ ಗೊಳಿಸಲು ಸಾಧ್ಯವಿರುವುದಿಲ್ಲ, ಆರೋಪಿಗಳು ಕೃತ್ಯವೆಸಗಿರುವ ಸಂಬಂಧ ಸಾಕಷ್ಟು ದಸ್ತಾವೇಜು ಸಾಕ್ಷ್ಯ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ ಆರೋಪಿಗಳನ್ನು ಈ ಹಂತದಲ್ಲಿ ಪ್ರಕರಣದಿಂದ ವಿಮೋಚನೆಗೊಳಿಸಲು ಯಾವುದೇ ಆಧಾರವಿರುವುದಿಲ್ಲವೆಂದು ನ್ಯಾಯಾಲಯ ಅಭಿಪ್ರಾಯಕ್ಕೆ ಬಂದಿರುತ್ತದೆ. ಅದರಂತೆ ಪ್ರಶ್ನೆ.1 ನ್ನು **ನಕರಾತ್ಮಕವಾಗಿ** ಉತ್ತರಿಸುತ್ತೇನೆ.

10. <u>ಪ್ರಶ್ನೆ-2ಃ</u> ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರಿಸಿರುವಂತೆ ಅಂತಿಮ ಆದೇಶ ಕೆಳಕಂಡಂತಿರುತ್ತದೆ.

**ಃ ಆದೇಶ ಃ**

**ದಂ. ಪ್ರ. ಸಂ. ಕಲಂ 239 ರ ಅನ್ವಯ 1 ರಿಂದ 3ನೇ ಆರೋಪಿಗಳು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿದೆ. ಪ್ರಕರಣವನ್ನು ದೋಷಾರೋಪಣೆ ರಚಿಸಲು ದಿನಾಂಕ 24-04-2025 ಕ್ಕೆ ಮುಂದೂಡಲಾಗಿದೆ.**

(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನವನ್ನು ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ, ಸಹಿ ಮಾಡಿ ನಂತರ ಇಂದು 12**ನೇ ಫೆಬ್ರವರಿ** - 2025 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

**(ಕೇಶವಮೂರ್ತಿ .ಬಿ.)**
IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು ನಗರ.

**12-02-2025**

**(ಆದೇಶವನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

**:ಆದೇಶ :**

**ದಂ. ಪ್ರ. ಸಂ. ಕಲಂ 239 ರ ಅನ್ವಯ 1 ರಿಂದ 3ನೇ ಆರೋಪಿಗಳು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿದೆ. ಪ್ರಕರಣವನ್ನು ದೋಷಾರೋಪಣೆ ರಚಿಸಲು ದಿನಾಂಕ 24.04.2025 ಕ್ಕೆ ಮುಂದೂಡಲಾಗಿದೆ.**

**(ಪ್ರತ್ಯೇಕವಾಗಿ ಆದೇಶ ಮಾಡಲಾಗಿದೆ)**

IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು ನಗರ.